# ಸಂತ ಸೇವೆಯ ದಿವ್ಯ ಭಾವನೆ

ಮೂಲ ಹಿಂದೀ : **ಸ್ವಾಮಿ ಜಪಾನಂದ**

ಕನ್ನಡಕ್ಕೆ : **ರೂಪಶ್ರೀ ನಾಗರಾಜ್**



**ಶಾ**ಂತ ಸುಂದರ ಶೀತಲವಾದ ಹಿಮಾಚಲ ಪ್ರದೇಶ. ತೀರ್ಥಕ್ಷೇತ್ರ ಯಮುನೋತ್ರಿಯ ರಸ್ತೆಯಲ್ಲಿ ಸುಮಾರು ೯ ಮೈಲಿ ಮುಂದೆ ಒಂದು ಪಹಾಡಿ ಹಳ್ಳಿ ಇದೆ. ರಸ್ತೆಯಿಂದ ಸ್ವಲ್ಪ ಮೇಲೆ ಪಹಾಡಿಯ ಒಂದು ದಿಬ್ಬದ ಮೇಲೆ, ದೂರದಿಂದ ನೋಡಿದಾಗ, ಬಿಳಿ ಹೊದಿಕೆಯನ್ನು ಹೊದ್ದಿಸಲಾಗಿದೆಯೋ ಎಂಬಂತೆ ಮನೋಹರವಾದ ಎರಡು ಬದಿಯಲ್ಲೂ ದೂರದವರೆಗೂ ಹಿಮಚುಂಬಿತ ಬಿಳಿಯ ಗಿರಿ ಶೃಂಗಗಳು. ಅಪೂರ್ವ ಪ್ರಾಕೃತಿಕ ಸೌಂದರ್ಯ ಮೈವೆತ್ತಂತೆ ಇರುವ ಅದರ ಮಧ್ಯೆಯೇ ಈ ಹಳ್ಳಿ ಇರುವುದು.

ಪರಿವ್ರಾಜಕ ಸಂನ್ಯಾಸಿಯು ಹಿಮಾಲಯದಲ್ಲಿ ಸುತ್ತಾಡುತ್ತಾ ಈ ಹಳ್ಳಿಗೆ ಬಂದು ತಲುಪಿದ. ಬಹಳ ಹಸಿವೆಯಾಗುತ್ತಿತ್ತು. ಹಿಂದಿನ ದಿನ ಆಹಾರ ಸರಿಯಾಗಿ ಸಿಗದಿದ್ದ ಕಾರಣ ಅನ್ನದ ಆವಶ್ಯಕತೆ ಬಹಳವೇ ಆಗುತ್ತಿತ್ತು. ಆದರೆ ಇಲ್ಲೆಲ್ಲಿ ?? ಹಳ್ಳಿಯಂತೂ ಖಾಲಿಖಾಲಿಯಂತೆ ತೋರುತ್ತಿತ್ತು. ಆದರೆ ಮನುಷ್ಯರಂತೂ ಇದ್ದಾರೆ, ಏಕೆಂದರೆ ಹಸುಗಳು ಮೇಯುತ್ತಾ ಅಲೆದಾಡುತ್ತಿವೆ. ನಾಯಿಗಳೂ ಇವೆ. ವಸತಿಗಳ ಕೆಲವು ಬೇರೆ ಚಿಹ್ನೆಗಳೂ ಇವೆ. ಒಂದು ಮನೆಯ ಅಂಗಳದಲ್ಲಿ ಕುಳಿತು ಒಬ್ಬ ಮುದುಕಿ ಚರಕದಲ್ಲಿ ಹತ್ತಿಯನ್ನು ನೂಲುತ್ತಿದ್ದಳು. ಸಂನ್ಯಾಸಿಯನ್ನು ನೋಡಿದ ಕೊಡಲೇ ಅವಳು ಬಹಳ ಪ್ರೀತಿಯಿಂದ ಸ್ವಾಗತ ಪೂರ್ವಕವಾಗಿ ಹೇಳಿದಳು, ''ಬನ್ನಿ ನಾರಾಯಣ ಸ್ವರೂಪರೇ, ಬನ್ನಿ'' ಮತ್ತು ಚಾಪೆಯ ಒಂದು ಆಸನವನ್ನು ಹಾಸಿದಳು. ''ಇವತ್ತು ನೀವು ನಮ್ಮ ಮನೆಗೆ ಬಂದಿದ್ದೀರಿ, ನಿಜಕ್ಕೂ ನಮ್ಮ ಅದೃಷ್ಟ. ಇಲ್ಲೇ ಊಟ ಮಾಡಿ ಹೋಗಬೇಕು. ಮಗ ಸೊಸೆ ಎಲ್ಲರೂ ಹುಲ್ಲಿನ ಬೀಜವನ್ನು ತರಲು ಹೋಗಿದ್ದಾರೆ. ಐದು ಹಳ್ಳಿಗಳಷ್ಟು ದೂರ, ಬೆಳಿಗ್ಗೆಯೇ ಎದ್ದು ಹೋಗಿದ್ದಾರೆ. ಸಂಜೆಯ ಹೊತ್ತಿಗೆ ಬಂದುಬಿಡುತ್ತಾರೆ, ಬಂದು ರೊಟ್ಟಿ ಮಾಡುತ್ತಾರೆ. ನೀವೂ ತಿನ್ನಬಹುದು. ಎರಡು ವರ್ಷಗಳಿಂದ ಫಸಲು ಹೆಚ್ಚಾಗಿ ಬಂದಿಲ್ಲ, ಏನು ಮಾಡುವುದು? ಎಲ್ಲಾ ಪರಮೇಶ್ವರನ ಇಚ್ಛೆ'' ಎಂದಳು.

ಅಷ್ಟರಲ್ಲಿ ಒಬ್ಬ ವೃದ್ಧರು ಬಂದರು. ಅವರು ಹಳ್ಳಿಯ ಪ್ರಧಾನ ಮುಖ್ಯಸ್ಥರಾಗಿದ್ದರು. 'ಓಂ ನಮೋ ನಾರಾಯಣಾಯ' ಎಂದು ಹೇಳುತ್ತಾ ಬಹಳ ಸೌಜನ್ಯದಿಂದ ನಮಸ್ಕಾರದೊಂದಿಗೆ ಸಂನ್ಯಾಸಿಯ ಸ್ವಾಗತ ಮಾಡಿ ಹೇಳಿದರು, ''ಮಾನ್ಯರೇ ನೀವು ನನ್ನ ಮನೆಗೆ ಬನ್ನಿ. ಇವರಿಗೆ ಇಲ್ಲಿ ಯಾರೂ ಇಲ್ಲ, ಎಲ್ಲರೂ ಹುಲ್ಲಿನ ಬೀಜ ತರಲು ಹೋಗಿದ್ದಾರೆ. ಹಳ್ಳಿಯ ಎಲ್ಲ ಹೆಂಗಸರೂ ಹೋಗಿದ್ದಾರೆ. ಬಲಿಷ್ಠ ಪುರುಷರು ಕೂಲಿ ಕೆಲಸಕ್ಕೆ ಎಂದು ಮಸೂರಿ ಡೆಹ್ರಾಡೂನ್ ಕಡೆ ಹೋಗಿದ್ದಾರೆ. ಸ್ವಲ್ಪ ಹಣ ಗಳಿಸುತ್ತಾರೆ ಮತ್ತು ನಂತರ ಧಾನ್ಯಗಳನ್ನು ಕೊಂಡು ತರುತ್ತಾರೆ. ಎರಡು ವರ್ಷಗಳಿಂದ ಇಲ್ಲಿ ಏನೂ ಬೆಳೆದಿಲ್ಲ ಸ್ವಾಮಿ. ಏನು ಮಾಡುವುದು? ಹೊಟ್ಟೆಪಾಡಿಗೋಸ್ಕರ ಏನಾದರೂ ಉಪಾಯ ಮಾಡಲೇಬೇಕಲ್ಲ... ಈಗ ಊಟದ ಸಮಯವಾಯಿತು. ನನ್ನ ಮನೆಯಲ್ಲಿ ರೊಟ್ಟಿ ತಯಾರಿದೆ ನಡೆಯಿರಿ'' ಎಂದರು. ಆದರೆ ಆ ಮುದುಕಿ ಇವರನ್ನು ಬಿಡಲು ತಯಾರಿರಲಿಲ್ಲ.

''ನಮ್ಮ ಮನೆಗೆ ಸಂತರು ಬಂದಿದ್ದಾರೆ, ಸ್ವಲ್ಪ ಏನಾದರೂ ತಿನ್ನದೆ ಹೇಗೆ ಹೋಗುತ್ತಾರೆ? ಅದು ಅಧರ್ಮವಾಗುತ್ತದೆ. ಸಂಜೆಯ ಹೊತ್ತಿಗೆ ಮಗ ಸೊಸೆ ಬಂದುಬಿಡುತ್ತಾರೆ, ಆ ಸಮಯಕ್ಕೆ ರೊಟ್ಟಿಯೂ ಸಿದ್ಧವಾಗುತ್ತದೆ. ಈಗ ಮನೆಯಲ್ಲಿ ಏನೂ ಇಲ್ಲ. ಏನು ಮಾಡುವುದು? ಇಲ್ಲದಿದ್ದರೆ ನಾನೇ ಮಾಡಿ ಬಡಿಸುತ್ತಿದ್ದೆ. ನನಗೂ ಗೊತ್ತು ಊಟದ ಸಮಯವಾಗಿದೆ. ಆದರೆ ಮನೆಗೆ ಬಂದಿದ್ದಾರಲ್ಲ, ನಾನೇ ಅವರನ್ನು ಕರೆದು ಕೂರಿಸಿದ್ದೇನೆ. ಈಗ ಹಾಗೆಯೇ ಹೋದರೆ ಅಧರ್ಮವಾಗುತ್ತದೆ'' ಎಂದು ಬಡಬಡಾಯಿಸಿದಳು.

ಪ್ರಧಾನರಂತೂ ಬಹಳಷ್ಟು ಸಮಜಾಯಿಸಿದರು.. ಹಸಿವೆಯಾಗಿದೆ ಅವರಿಗೆ. ಹಾಗೇ ಕೂಡಿಸುವುದು ಉಚಿತವಲ್ಲ. ನಾವೆಲ್ಲರೂ ಒಂದೇ ತಾನೇ.. ಇದರಲ್ಲಿ ಏನೂ ತಪ್ಪಿಲ್ಲ. ಹಳ್ಳಿಯ ಪರವಾಗಿ ನಾನು ಹಾಜರಿದ್ದೇನಲ್ಲ.. ನನ್ನ ಸತ್ಕರ್ಮದ ಫಲವೂ ಸ್ವಲ್ಪ ಭಾಗವಿರುತ್ತದೆ  ಎಂದರು. ಆದರೆ ಮುದುಕಿಯು ಮನೆಯಂಗಳದಿಂದ ಏನನ್ನೂ ತೆಗೆದುಕೊಳ್ಳದೆ ಹೊರಟುಹೋಗುವುದು ಖಂಡಿತ ಸರಿಯಲ್ಲ ಎಂದು ಹೇಳಿ ಒಳಗೆ ಹೋಗಿ ಒಂದು ಹಿಡಿಯ ತುಂಬ ಬೆಲ್ಲ ತಂದು ಸನ್ಯಾಸಿಯ ಕೈಲಿಟ್ಟು ಕಣ್ಣಲ್ಲಿ ನೀರು ತುಂಬಿಕೊಂಡು, ''ಮಾನ್ಯರೇ, ಮನೆಯಲ್ಲಿ ಇನ್ನೇನೂ

ಇಲ್ಲ, ಇದನ್ನಾದರೂ ಸ್ವೀಕರಿಸಿ'' ಎಂದು ಹೇಳಿ ಕೈ ಮುಗಿದು ಕುಳಿತುಬಿಟ್ಟಳು. ಸಂನ್ಯಾಸಿಯು ಪ್ರೀತಿಯಿಂದ ಅದನ್ನು ತಿಂದು ಒಳ್ಳೆಯ ಆಶೀರ್ವಾದ ಕೊಟ್ಟು, ಪ್ರಧಾನರೊಂದಿಗೆ ಅವರ ಮನೆಗೆ ಹೊರಟ.

ಪ್ರಧಾನರು ಬಹಳ ಪ್ರೀತಿಯಿಂದ ಪುಟ್ಟ ಪುಟ್ಟ ರೊಟ್ಟಿಗಳನ್ನು ಕೊಟ್ಟು ಹೇಳಿದರು, ''ಮಹಾರಾಜ್, ಇದರಲ್ಲಿ ತೃಪ್ತಿಪಟ್ಟು ಕೊಳ್ಳಿ. ರಾತ್ರಿಯ ಹೊತ್ತಿಗೆ ಕಾಡಿಗೆ ಬೀಜ ಸಂಗ್ರಹಿಸಲು ಹೋಗಿ ರುವ ಹೆಂಗಸರು ಬರುತ್ತಾರೆ, ಮತ್ತೆ ರೊಟ್ಟಿ ಮಾಡುತ್ತಾರೆ. ನೀವೂ ತಿನ್ನಬಹುದು. ಎರಡು ವರ್ಷಗಳಿಂದ ಏನೂ ಧಾನ್ಯ ಸಿಗುತ್ತಿಲ್ಲ, ಆಲೂಗಡ್ಡೆಯೂ ಆಗಲಿಲ್ಲ. ಇಲ್ಲದಿದ್ದರೆ ನಾವು ಅದ ರಲ್ಲಿಯೇ ಬದುಕು ಸವೆಸಬಹುದಾಗಿತ್ತು'' ಎಂದು ಹೇಳಿದರು.

ರೊಟ್ಟಿಯ ಬಣ್ಣವಂತೂ ಹಸಿ ತರಕಾರಿಯಷ್ಟು ಹಸಿರಾಗಿತ್ತು. ಅದನ್ನು ನೋಡಿಯೇ ಸಂನ್ಯಾಸಿ ಮನದಲ್ಲೇ ಗಾಬರಿಗೊಂಡು ಹೇಳಿದ, ''ಪ್ರಧಾನರೇ, ಹಳ್ಳಿಯಿಂದ ಹೊರಗೆ ನೀರಿನ ಝರಿಯ ಹತ್ತಿರ ತಿನ್ನುತ್ತೇನೆ'' ಎಂದು ಹೇಳಿ ಹಳ್ಳಿಯ ಹೊರಗೆ ಬಂದ. ಒಂದು ತುಂಡು ಮುರಿದು ಬಾಯಿಗೆ ಹಾಕಿದ ಕೂಡಲೇ ಕ್ವಿನೈನ್ ನಷ್ಟು ಕಹಿಯಾಗಿ, ಆ ರುಚಿಗೆ ಗಾಬರಿಯೇ ಆಯಿತು. 'ಅರೆ ಮನವೇ, ಈ ಊಟ ಎಷ್ಟು ಕಷ್ಟವಪ್ಪ... ನೀನು ಯಾವ ಸೀಮೆಯ ಸಾಹೇಬನೋ?? ತಿನ್ನು ತಿನ್ನು, ಇದನ್ನೇ ತಿಂದು ಜನ ಬದುಕುತ್ತಾರೆ, ಅದೂ ಎಷ್ಟು ಕಷ್ಟದಿಂದಲೇ ಸಿಗುತ್ತದೆ' ಎಂದು ಹೇಳಿತು ಬುದ್ಧಿ. ಆದರೆ ಮನಸ್ಸನ್ನು ಸಮಜಾಯಿಸಿದರೆ ಏನಾಗುತ್ತದೆ? ಬಾಯಲ್ಲಿ ಹಾಕಿಕೊಂಡರೆ ಇಡೀ ಹೊಟ್ಟೆಯಲ್ಲಿ ಇದ್ದಿದ್ದೆಲ್ಲ ಬಾಯಿಗೆ ಬಂದಂತಾಯಿತು. ಬಹಳ ಕಷ್ಟದಿಂದ ನೀರನ್ನು ಕುಡಿಯುತ್ತಾ ಒಂದೇ ತುಂಡು ಬಾಯಿಗೆ ಹಾಕಿಕೊಂಡ. ಆದರೆ ಮಿಕ್ಕಿದ್ದನ್ನು ತಿನ್ನಲು ಸಾಧ್ಯವೇ ಇಲ್ಲವೆಂದು ತೋರಿ ವಿಚಾರ ಮಾಡಿದ, ಈಗ ಏನು ಮಾಡಬಹುದು? ಊಟದಲ್ಲಿ ನೀಡಿರುವ ಅನ್ನ ಇತ್ಯಾದಿ ಯಾವುದೇ ವಸ್ತುವನ್ನೂ ಗೃಹಸ್ಥ ವಾಪಸ್ ತೆಗೆದು ಕೊಳ್ಳುವುದಿಲ್ಲ, ಅಧರ್ಮ ಎಂದೇ ತಿಳಿಯುತ್ತಾನೆ ಮತ್ತು ಸಂನ್ಯಾಸಿ ಯಂಥವರಿಗೂ ತೆಗೆದುಕೊಂಡದ್ದನ್ನು ಬಿಸಾಡುವುದು ಅಧರ್ಮವೇ ಸರಿ.

ಅಷ್ಟರಲ್ಲಿ ಆ ಸಂನ್ಯಾಸಿ ಕುಳಿತಿದ್ದ ಕಡೆಯಿಂದ, ಸ್ವಲ್ಪ ಮೇಲೆ, ಜೀರ್ಣಾವಸ್ಥೆಯಲ್ಲಿ ಅಸ್ಥಿಪಂಜರದಂತಿದ್ದ ಒಬ್ಬ ಗೊಲ್ಲರ ಹುಡುಗ ಕುಳಿತಿದ್ದು ಕಾಣಿಸಿತು. ಅವನು ಹಸಿದ ಹೆಬ್ಬುಲಿಯಂತೆ ಇವನ ರೊಟ್ಟಿಯ ಕಡೆಗೇ ನೋಡುತ್ತಿದ್ದ. ಸನ್ಯಾಸಿಯು ಅವನನ್ನು 'ಬಾ' ಎಂದು ಸನ್ನೆ ಮಾಡಿ ಕರೆದ ಕೂಡಲೇ ಅಲ್ಲಿಂದ ಹಾರಿ ಇವನ ಹತ್ತಿರ ಬಂದು ಹಾಜರಾದ ಮತ್ತು ಇವನು ನೀಡಿದ ಮೂರೂವರೆ ರೊಟ್ಟಿಗಳನ್ನು ಸಿಹಿ ತಿನಿಸು ತಿಂದಷ್ಟೇ ಖುಷಿಯಲ್ಲಿ ತಿಂದು ಬಿಟ್ಟು, ನೀರನ್ನು ಕುಡಿದುಬಿಟ್ಟು ನಡೆದ.

ಮೇಲಿನ ಇಡೀ ದೃಷ್ಟಾಂತವು ಶುದ್ಧ ಧಾರ್ಮಿಕತೆಯ ಲೇಪನದೊಂದಿಗೆ ಮಾನವತೆಯ ಒಂದು ಬೇರೆಯೇ ದೃಷ್ಟಿಕೋನವನ್ನು ನಮಗೆ ಉಣಬಡಿಸುತ್ತದೆ.

## ಯುವಚೇತನ



### ಜಗತ್ತಿನ ಅತ್ಯುಚ್ಚ ಶಿಖರ – ಮಾನವ

ಪರಿಶುದ್ಧಾತ್ಮರು ಮಾತ್ರ ದೇವರನ್ನು ನೋಡಬಲ್ಲರು. ಇರುವುದರಲ್ಲೆಲ್ಲ ಶ್ರೇಷ್ಠ ಜೀವಿಯೇ ಮಾನವ, ಶ್ರೇಷ್ಠ ಜಗತ್ತೇ ಈ ಪೃಥ್ವಿ. ಏಕೆಂದರೆ ಮಾನವ ಇಲ್ಲಿ ಮುಕ್ತಿಯನ್ನು ಪಡೆಯಬಹುದು. ದೇವರ ವಿಷಯವಾಗಿ ನಮಗೆ ದೊರಕುವ ಶ್ರೇಷ್ಠ ಭಾವನೆಯೇ ಮಾನವ. ನಾವು ದೇವರಿಗೆ ಆರೋಪಿಸುವ ಪ್ರತಿಯೊಂದು ವಿಶೇಷಣವೂ ಮಾನವನಿಗೇ ಅನ್ವಯವಾಗುತ್ತದೆ, ಆದರೆ ಅಲ್ಪ ಪ್ರಮಾಣದಲ್ಲಿ. ನಾವು ಉತ್ತಮರಾಗಿ ದೇವರ ಭಾವನೆಯನ್ನು ಮೀರಿಹೋಗಬೇಕಾದರೆ, ನಾವು ಈ ದೇಹ, ಮನಸ್ಸು, ಕಲ್ಪನೆ, ಇವನ್ನೆಲ್ಲ ಮೀರಿ ಹೋಗಬೇಕು. ಈ ಜಗತ್ತನ್ನು ದಾಟಿ ಹೋಗಬೇಕು. ನಾವು ನಿರಪೇಕ್ಷ ಸ್ಥಿತಿಗೆ ಹೋದರೆ ಆಗ ನಾವು ಈ ಪ್ರಪಂಚದಲ್ಲಿ ಇರುವುದಿಲ್ಲ. ಅಲ್ಲಿ ದೃಶ್ಯವೇ ಇಲ್ಲ. ಇರುವುದೆಲ್ಲ ದೃಕ್. ನಾವು ಅರಿತುಕೊಳ್ಳಬಹುದಾದ ಏಕೈಕ ಜಗತ್ತಿನ ಅತ್ಯುಚ್ಚ ಶಿಖರವೆಂದರೆ ಮಾನವನೇ. ಯಾರು ಸಮತ್ವವನ್ನು ಅಥವಾ ಪೂರ್ಣತೆಯನ್ನು ಪಡೆದಿರುವರೋ ಅವರು ದೇವರಲ್ಲಿ ಬಾಳುತ್ತಿರುವರು. ದ್ವೇಷವೆಲ್ಲ ತನ್ನಿಂದ ತನಗೇ ಹಾನಿಯನ್ನು ಉಂಟುಮಾಡಿಕೊಳ್ಳುವುದಾಗಿದೆ. ಆದಕಾರಣ ಪ್ರೇಮವೇ ಜೀವನದ ಏಕಮಾತ್ರ ನಿಯಮ. ನಾವು ಈ ಸ್ಥಿತಿಗೆ ಏರಿದರೆ ಪೂರ್ಣರಾಗುವೆವು... ನಾವು ಭೌತಿಕ ಪ್ರಪಂಚದಲ್ಲಿ ಎಂದಿಗೂ ಸ್ವತಂತ್ರರಲ್ಲ ; ಆದರೆ ಆಧ್ಯಾತ್ಮಿಕ ಪ್ರಪಂಚದಲ್ಲಿ ಸದಾ ಮುಕ್ತರು. ಬಂಧನಮುಕ್ತಿಗಳಾಚೆ ಆತ್ಮನಿರುವುದು. ನಾವೇ ಬ್ರಹ್ಮ. ಅಮೃತಸ್ವರೂಪವಾದ ಜ್ಞಾನ ನಾವೇ. ನಾವು ಇಂದ್ರಿಯ ಗಳಿಗೆ ಅತೀತರಾಗಿರುವೆವು. ನಾವು ಆನಂದಮಯರು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೬, ಪು. ೭೬–೭೭)*